ಕೇಂದ್ರ ಇದೆಯೇ? ಸದರಿ ಕೇಂದ್ರದ ತರಬೇತುದಾರರಿಗೆ ವಸತಿ ಸೌಕರ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ?

ಆ) ಹುಮ್ನಾಬಾದ್ ಬಸ್ ನಿಲ್ದಾಣದಲ್ಲಿ ಸಮರ್ಪಕವಾದ ನೀರಿನ ವ್ಯವಸ್ಥೆ ಹಾಗೂ ಶೌಚಾಲಯದ ವ್ಯವಸ್ಥೆ ಅನುಕೂಲಗಳಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಶೌಚಾಲಯ ಇದ್ದು ಸಹ ಉಪಯೋಗಿಸದಂತೆ ಆಗಿರುವ ಬಗ್ಗೆ ಪತ್ತೆ ಮಾಡಿ ಯಾವ ಪರಿಹಾರ ಕಂಡುಕೊಳ್ಳಲಾಗಿದೆ. ಈ ಶೌಚಾಲಯ ಸಮರ್ಪಕ ನಿರ್ವಹಣೆ ಹೊಣೆ ಯಾರು?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

ಅ) ಬೀದರ್ ಜಿಲ್ಲೆ ಹುಮ್ನಾಬಾದ್‌ನಲ್ಲಿ ಸಂಸ್ಥೆಯ ಪ್ರಾದೇಶಿಕ ತರಬೇತಿ ಕೇಂದ್ರ ಇದೆ. ಸದರಿ ಕೇಂದ್ರದಲ್ಲಿ 50 ತರಬೇತಿದಾರರಿಗೆ ವಸತಿ ಸೌಲಭ್ಯ ಇದೆ.

ಆ) ಹುಮ್ನಾಬಾದ್ ಬಸ್ ನಿಲ್ದಾಣದಲ್ಲಿ ತೆರೆದ ಬಾವಿಯಿಂದ ಪ್ರಯಾಣಿಕರಿಗೆ ನೀರಿನ ವ್ಯವಸ್ಥೆಯನ್ನು ಹಾಗೂ ಶೌಚಾಲಯದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಪುರಸಭೆಯ ವತಿಯಿಂದಲೂ ನೀರಿನ ಸರಬರಾಜನ್ನು ಪಡೆದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ.

ಇ) ಶೌಚಾಲಯದ ವ್ಯವಸ್ಥೆ ಸಮರ್ಪಕವಾಗಿದ್ದು ಸ್ವಚ್ಛತೆ, ಹಾಗೂ ನಿರ್ವಹಣೆಯನ್ನು ಸ್ವಚ್ಛತಾ ಗುತ್ತಿಗೆದಾರರಿಗೆ ವಹಿಸಲಾಗಿದೆ.

ಹುಮ್ನಾಬಾದ್ ಕ್ಷೇತ್ರದಲ್ಲಿ ವಸತಿ ನಿವೇಶನ ಹಾಗೂ ಮನೆಗಳ ಹಂಚಿಕೆ

4903 - ಶ್ರೀ ಸುಭಾಶ್ ಕಲ್ಲೂರ್ (ಹುಮ್ನಾಬಾದ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆ ಹುಮ್ನಾಬಾದ್ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಿಂದ ಆಶ್ರಯ, ಇಂದಿರಾ ಆವಾಜ್ ಅಂಬೇಡ್ಕರ್ ಯೋಜನೆಗಳಡಿಯಲ್ಲಿ ಎಷ್ಟು ಮನೆಗಳನ್ನು (ನಿವೇಶನಗಳನ್ನು) ವಿತರಿಸಲಾಗಿದೆ?

ಆ) ಆ ಪೈಕಿ ಮನೆ ಕಟ್ಟಿ ಹಂಚಿರುವ ಸಂಖ್ಯೆ ಎಷ್ಟು? ಕಟ್ಟದೆ ವಿತರಿಸಿರುವ ಸಂಖ್ಯೆ ಎಷ್ಟು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) *ಗ್ರಾಮೀಣ ಪ್ರದೇಶದಲ್ಲಿ ವಿತರಿಸಲಾದ ಮನೆಗಳ ವಿವರ*

ಯೋಜನೆ	1997-98	1998-99	1999-2000
ಆಶ್ರಯ	175	225	400
ಅಂಬೇಡ್ಕರ್	194	196	126
ಇಂದಿರಾ ಆವಾಜ್	291	420	325

ಪಟ್ಟಣ ಪ್ರದೇಶದಲ್ಲಿ ವಿತರಿಸಲಾದ ಮನೆಗಳ ವಿವರ

ಯೋಜನೆ	1997-98	1998-99	1999-2000
ಆಶ್ರಯ	40	-	-
ಅಂಬೇಡ್ಕರ್	-	-	-
ಇಂದಿರಾ ಆವಾಜ್	-	-	-

ಆ) ಗ್ರಾಮೀಣ ಪ್ರದೇಶಗಳಲ್ಲಿ ಮನೆ ಕಟ್ಟಿ ಹಂಚಿರುವ ವಿವರ

ಯೋಜನೆ	1997-98	1998-99	1999-2000
ಆಶ್ರಯ	175	175	-
ಅಂಬೇಡ್ಕರ್	190	184	-
ಇಂದಿರಾ ಆವಾಜ್	291	420	246

ಪಟ್ಟಣ ಪ್ರದೇಶದಲ್ಲಿ ಮನೆ ಕಟ್ಟಿ ವಿತರಿಸಲಾದ ಮನೆಗಳ ವಿವರ

ಯೋಜನೆ	1997-98	1998-99	1999-2000
ಆಶ್ರಯ	40	-	-
ಅಂಬೇಡ್ಕರ್	-	-	-
ಇಂದಿರಾ ಆವಾಜ್	-	-	-

ಗ್ರಾಮೀಣ ಪ್ರದೇಶದಲ್ಲಿ ಮನೆ ಕಟ್ಟದೆ ವಿತರಿಸಿರುವ ವಿವರ

ಯೋಜನೆ	1997-98	1998-99	1999-2000
ಆಶ್ರಯ	-	50	400
ಅಂಬೇಡ್ಕರ್	04	12	126
ಇಂದಿರಾ ಆವಾಜ್	-	-	79

ಪಟ್ಟಣ ಪ್ರದೇಶದಲ್ಲಿ ಮನೆ ಕಟ್ಟದೆ ವಿತರಿಸಿರುವುದಿಲ್ಲ

ಹುಮ್ನಾಬಾದ್ ಕ್ಷೇತ್ರದ ಭೂ ಮಂಜೂರಾತಿ ಸಮಿತಿ ರಚನೆ

4904 - ಶ್ರೀ ಸುಭಾಶ್ ಕಲ್ಲೂರ್ (ಹುಮ್ನಾಬಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಮ್ನಾಬಾದ್ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಒಂದು ವರ್ಷದಿಂದ ಲ್ಯಾಂಡ್ ಗ್ರ್ಯಾಂಟ್ ಕಮಿಟಿ (ಭೂ ಮಂಜೂರಾತಿ ಸಮಿತಿ) ರಚಿಸದೆ ಇರುವ ಸಂಗತಿ ಸರ್ಕಾರಕ್ಕೆ ತಿಳಿದಿದೆಯೆ?